

# ಮೂರು ಪ್ರಶ್ನೆಗಳು

■ ವಿ. ವಿಜಯೇಂದ್ರ ರಾವ್
ಕಲೆ: ಸಂತೋಷ್ ಸಸಿಹಿತ್ಲು

ದೇವರು ಎಲ್ಲಿದ್ದಾರೆ? ಹೇಗೆ ಇದ್ದಾರೆ? ಏನು ಮಾಡಿಕೊಂಡು ಇದ್ದಾರೆ?

ಈ ಪ್ರಶ್ನೆಗಳನ್ನು ಕೇಳಿದ ರಾಜನಿಗೆ ಆ ಸಭೆಯಲ್ಲಿನ ಯಾರೊಬ್ಬರೂ ಉತ್ತರ ಹೇಳಲು ತಯಾರಿರಲಿಲ್ಲ. ಆಗ ಅವನ ಮೇಧಾವಿ ಮಂತ್ರಿಯು –ಮಹಾರಾಜರೇ, ನಾನು ನಿಮ್ಮ ಪ್ರಶ್ನೆಗಳಿಗೆ ಉತ್ತರ ಹೇಳುತ್ತೇನೆ ಎಂದು ಹೇಳಿ– 'ನನಗೆ ಒಂದು ಮೇಣದ ಬತ್ತಿ ತರಿಸಿಕೊಡಿ' ಎಂದು ಕೇಳಿದ. ಒಬ್ಬ ಸೇವಕನು ಮೇಣದ ಬತ್ತಿಯನ್ನು ಅವನಿಗೆ ತಂದು ಕೊಡುತ್ತಾನೆ.

ಅವನು ಬೆಂಕಿಕಡ್ಡಿ ಗೀರಿ ಅದನ್ನು ಹಚ್ಚಿ, ಆ ಮೇಣದ ಬತ್ತಿಯ ಜ್ಯೋತಿಯನ್ನು ತೋರಿಸಿ, ಇದು ಯಾವ ದಿಕ್ಕನ್ನು ತೋರಿಸುತ್ತಿದೆ ಎಂದು ಕೇಳಿದಾಗ, ಅದು ಮೇಲಿನ ದಿಕ್ಕನ್ನು ತೋರಿಸುತ್ತಿದೆ ಎಂದನು. ಆಗ ಮಂತ್ರಿಯು ಆ ಮೇಣದ ಬತ್ತಿಯನ್ನು ಮೇಲೆ, ಕೆಳಗೆ, ಹಿಂದೆ, ಮುಂದೆ ಯಾವ ದಿಕ್ಕಿಗೆ ತಿರುಗಿಸಿದರೂ ಅದು ಮೇಲ್ಮುಖವಾಗಿ ತೋರಿಸುತ್ತಿತ್ತು. ಆಗ ಮಂತ್ರಿಯು 'ನಾವು ಜ್ಯೋತಿಯನ್ನು ಸಾಕ್ಷಿಯಾಗಿಟ್ಟುಕೊಂಡು ದೇವರು ಸದಾ ನಮ್ಮ ಮೇಲೆಯೇ ಇರುತ್ತಾರೆ ಬೇರೆ ಯಾವ ದಿಕ್ಕಿನಲ್ಲೂ ಅಲ್ಲ' ಎಂದು ಖಡಾಖಂಡಿತವಾಗಿ ಹೇಳಿದರು.

ಇನ್ನು ದೇವರು ಹೇಗಿದ್ದಾರೆ ಅಂತ? ಇದನ್ನು ವಿವರಿಸಲು ಒಂದು ಸಣ್ಣ ಪಾತ್ರೆಯಲ್ಲಿ ಹಾಲನ್ನು ಕೊಡಿ ಎಂದಾಗ, ಸೇವಕನು ಅದನ್ನು ತಂದು ಕೊಟ್ಟನು. ಇದಕ್ಕೆ ಸ್ವಲ್ಪ ಮೊಸರು ಹಾಕಿದರೆ, ಸ್ವಲ್ಪ ಸಮಯದ ನಂತರ ಅದು ಪೂರ್ತಿಯಾಗಿ ಮೊಸರಾಗುತ್ತದೆ. ಆ ಮೊಸರನ್ನು ಚೆನ್ನಾಗಿ ಕಡೆದರೆ ಬೆಣ್ಣೆಯಾಗುತ್ತದೆ. ಆ ಬೆಣ್ಣೆಯನ್ನು ಹದವಾಗಿ ಕಾಯಿಸಿದರೆ ಅದು ತುಪ್ಪವಾಗುವುದು ಅಲ್ವೇ? ಎಂದು ರಾಜನಿಗೆ ಕೇಳಿದಾಗ, ಅವರು ಹೌದೆಂದು ತಲೆಯಾಡಿಸಿದರು. ಹಾಗಾದರೆ, ಈ ಸಣ್ಣ ಪಾತ್ರೆಯಲ್ಲಿ ಹಾಲು, ಮೊಸರು, ಬೆಣ್ಣೆ, ತುಪ್ಪ ಇದೆ ಎಂದು ಒಪ್ಪಿಕೊಳ್ಳುತ್ತೀರಾ ಎಂದು ಕೇಳಿದಾಗ, ಅವರು ಮತ್ತೆ ಹೌದೆಂದು ಒಪ್ಪಿಕೊಂಡರು. ಆದರೆ, ಈ ಹಾಲಿನ ಯಾವ ಭಾಗದಲ್ಲಿ ಮೊಸರು, ಯಾವ ಭಾಗದಲ್ಲಿ ಬೆಣ್ಣೆ, ಯಾವ ಭಾಗದಲ್ಲಿ ತುಪ್ಪ ಇದೆಯೆಂದು ನಿಮಗೆ ಬೇರೆ ಬೇರೆಯಾಗಿ ತೋರಿಸಲು ಸಾಧ್ಯವೇ ಎಂದು ಕೇಳಿದಾಗ, ಅದು ಹೇಗೆ ಸಾಧ್ಯ? ಎಲ್ಲಾ ಒಂದರೊಳಗೊಂದು ಬೆರೆತುಕೊಂಡಿದೆ ಎಂದಾಗ, ಮಂತ್ರಿಯು 'ಹಾಗೆಯೇ ದೇವರು ನಮ್ಮೆಲ್ಲರೊಳಗೂ ಅಡಗಿಕೊಂಡಿರುತ್ತಾರೆ. ಅವರು ಎಲ್ಲೆಡೆಯೂ ಇರುತ್ತಾರೆ, ಅವರಿಲ್ಲದ ಜಾಗ, ಅವರಿಲ್ಲದ ವಸ್ತು ಯಾವುದೂ ಇಲ್ಲ' ಎಂದು ಸಮರ್ಥಿಸಿದನು.

ಇನ್ನು ದೇವರು ಏನು ಮಾಡಿಕೊಂಡಿರುತ್ತಾರೆ ಅಂತ?

ಮಹಾರಾಜ, ನಾನು ನಿಮ್ಮ ಎರಡು ಪ್ರಶ್ನೆಗಳಿಗೆ ಈಗಾಗಲೇ ಸಮರ್ಪಕವಾಗಿ ಉತ್ತರ ಕೊಟ್ಟಿರುವುದರಿಂದ, ನಾನು ನಿಮಗೆ ಗುರುವಾಗಿದ್ದೇನೆ ಮತ್ತು ನೀವು ನನ್ನ ಶಿಷ್ಯ. ಆದ್ದರಿಂದ, ಗುರು ಕೆಳಗಿದ್ದು, ಶಿಷ್ಯ ಮೇಲೆ ಕೂತಿರುವುದು ಉಚಿತವಲ್ಲ. ಆದ್ದರಿಂದ, ನೀವು ಸಿಂಹಾಸನದಿಂದ ಕೆಳಗಿಳಿದು ಇಲ್ಲಿ ನಿಂತುಕೊಳ್ಳಿ, ನಾನು ಅಲ್ಲಿ ಕುಳಿತು ನಿಮ್ಮ ಪ್ರಶ್ನೆಗೆ ಉತ್ತರ ಹೇಳುತ್ತೇನೆ ಎಂದಾಗ, ರಾಜನು ಅಲ್ಲಿಂದ ಕೆಳಗಿಳಿದು, ಮಂತ್ರಿಯನ್ನು ಅಲ್ಲಿ ಕುಳ್ಳಿರಿಸಿ ನಿಂತಾಗ, ಆ ಮಂತ್ರಿ: ಯಾರಲ್ಲಿ, ಈ ಮತಿಗೆಟ್ಟ ರಾಜನನ್ನು ಸೆರೆಯಲ್ಲಿ ತಳ್ಳಿ, ಚಿತ್ರಹಿಂಸೆಯನ್ನು ಕೊಡಿ ಎಂದು ಆಜ್ಞೆ ಮಾಡಿದನು. ಅಲ್ಲಿದ್ದ ಎಲ್ಲರೂ ದಿಗ್ಭ್ರಮೆಗೊಂಡು ಏನಾಗುತ್ತಿದೆ ಎಂದು ಚಿಂತಿಸುತ್ತಿದ್ದಾಗ, ಆ ಮಂತ್ರಿಯು ಓಹ್ ಮಹಾರಾಜ ಭಯಪಡಬೇಡಿ, ನಾನು ಈಗ ರಾಜನಂತೆ ನಟಿಸಿದೆ ಅಷ್ಟೇ!

ಸ್ವಲ್ಪ ಹೊತ್ತಿನ ಮುಂಚೆ ಇಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದ ನಿಮ್ಮನ್ನು ಕೆಳಗಿಳಿಸಿ, ನನ್ನನ್ನು ಅಲ್ಲಿ ಕುಳ್ಳಿರಿಸಿ, ನಿಮ್ಮನ್ನು ಒಬ್ಬ ಸಾಧಾರಣ ಪ್ರಜೆಯನ್ನಾಗಿ ಮಾಡಿಬಿಟ್ಟರು ಆ ದೇವರು. ಆತ ಆಳಾಗಿರುವವನನ್ನು ಅರಸನನ್ನಾಗಿಯೂ, ಅರಸನಾಗಿರುವವನನ್ನು ಆಳನ್ನಾಗಿಯೂ ಮಾಡಬಲ್ಲವನು. ದೇವರು ಸಂದರ್ಭಕ್ಕೆ ತಕ್ಕಂತೆ ತನ್ನ ಭಕ್ತನಿಗೆ ಸಹಾಯವನ್ನು ವಿಧವಿಧವಾಗಿ ಅವನಿಗೆ ಗೊತ್ತಿಲ್ಲದಂತೆ ಮಾಡುತ್ತಲೇ ಇರುತ್ತಾನೆ ಎಂದಾಗ, ರಾಜನು ಆ ಮಂತ್ರಿಗೆ ಕೈ ಮುಗಿದು, ನಿನ್ನಂಥ ವಿದ್ವಾಂಸ ನನ್ನ ರಾಜಸಭೆಯಲ್ಲಿ ಇರುವುದು ಆ ದೇವರ ಒಂದು ಲೀಲೆ ಎಂದಾಗ, ಎಲ್ಲರೂ ಹೌದೆಂದು ಸಮ್ಮತಿಸಿದರು. ■